# ವೈದ್ಯ ಇತಿಹಾಸದಲ್ಲೇ ಪ್ರಥಮ

## ಮಗನಿಂದಲೇ ಇಂದು ತಂದೆಯ ದೇಹ ಭೇದನ

ಸಂಗ್ರಹ



> ವೈದ್ಯ ವಿದ್ಯಾರ್ಥಿಗಳಿಗೆ ಮಾನವ ಶರೀರದ ಪರಿಚಯ ಇರಲೇಬೇಕೆಂದು ಪ್ರತಿಪಾದಿಸುತ್ತಿದ್ದವರು ಡಾ. ಬಿ.ಎಸ್. ರಾಮಣ್ಣವರ. ಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ತಮ್ಮ ದೇಹದಾನ ಮಾಡಿದ್ದರು. ಇದು ನಡೆದು ಎರಡು ವರ್ಷ ಕಳೆದಿತ್ತು. ಈಗ ಮಾನಸಿಕ ಹೊಯ್ದಾಟ ಮೀರಿ ಗಟ್ಟಿಯಾಗಿರುವ ಡಾ. ಮಹಾಂತೇಶ ಅವರು ತಮ್ಮ ತಂದೆಯ ದೇಹ ಭೇದನಕ್ಕೆ ಹೊರಟಿದ್ದಾರೆ.

ಅಪ್ಪನ ದೇಹ ಭೇದನಕ್ಕೆ ಸಿದ್ಧತೆ ಮಾಡಿಕೊಂಡಿರುವ ಡಾ. ಮಹಾಂತೇಶ್.

▪ ರಾಜು ಉಸ್ತಾದ ಬೆಳಗಾವಿ

ವೈದ್ಯಕೀಯ ಅಧ್ಯಯನಕ್ಕೆಂದು ದಾನವಾಗಿ ನೀಡಲಾಗಿರುವ ಬೈಲಹೊಂಗಲದ ದಿ. ಡಾ. ಬಿ.ಎಸ್. ರಾಮಣ್ಣವರ ಶರೀರ ನ. 13ರಂದು ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳ ಅಧ್ಯಯನಕ್ಕೆ ಬಳಕೆಯಾಗಲಿದೆ.

ಡಾ. ಬಿ.ಎಸ್. ರಾಮಣ್ಣವರ ಪಾರ್ಥಿವ ಶರೀರ ಸದ್ಯ ಬೆಳಗಾವಿ ಕೆಎಲ್ಇ ಸಂಸ್ಥೆಯ ಜೆ.ಎಂ. ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯದಲ್ಲಿದೆ. ಅಲ್ಲಿ ಸಹಪ್ರಾಧ್ಯಾಪಕರಾಗಿರುವ ಅವರ ಪುತ್ರ ಡಾ. ಮಹಾಂತೇಶ, ಈ ದೇಹ ಭೇದನ ಮಾಡಿ ವೈದ್ಯ ವಿದ್ಯಾರ್ಥಿಗಳಿಗೆ ಶರೀರ ರಚನೆಯ ಬಗ್ಗೆ ಪಾಠ ಮಾಡಲಿದ್ದಾರೆ.

ವೈದ್ಯ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ ಮಾನವ ಶರೀರದ ಪರಿಚಯ ಇರಲೇಬೇಕೆಂದು ಪ್ರತಿಪಾದಿಸುತ್ತಿದ್ದವರು ಡಾ. ಬಿ.ಎಸ್. ರಾಮಣ್ಣವರ. ಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ತಮ್ಮ ದೇಹದಾನ ಮಾಡಿದ್ದರು. ಇದು ನಡೆದು ಎರಡು ವರ್ಷ ಕಳೆದಿತ್ತು. ಈಗ ಮಾನಸಿಕ ಹೊಯ್ದಾಟ ಮೀರಿ ಗಟ್ಟಿಯಾಗಿರುವ ಡಾ. ಮಹಾಂತೇಶ ಅವರು ತಮ್ಮ ತಂದೆಯ ದೇಹಕ್ಕೆ ವೈದ್ಯಕೀಯ ಉಪಕರಣಗಳ ಸ್ಪರ್ಶ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಮಹಾಂತೇಶರ ತಾಯಿ, ಪತ್ನಿ ಉಪಸ್ಥಿತರಿರುವರು. ಮಧ್ಯಾಹ್ನ 3.15ಕ್ಕೆ ಭೇದನ ನಡೆಯಲಿದೆ.

ದೇಹದಾನ ಮತ್ತು ಭೇದನ ವೈದ್ಯಕೀಯ ವಿಜ್ಞಾನಕ್ಕೆ ಹೊಸದಲ್ಲವಾದರೂ ಇಲ್ಲಿ ಸ್ವತಃ ಮಗನೇ ತಂದೆಯ ದೇಹ ಭೇದನ ಮಾಡುತ್ತಿರುವುದೇ ವಿಶೇಷ. ಇದು ಜಗತ್ತಿನಲ್ಲಿಯೇ ಪ್ರಥಮ ಘಟನೆ. ಹೀಗಾಗಿ ಜಾಗತಿಕ ವೈದ್ಯಕೀಯ ಕ್ಷೇತ್ರದಲ್ಲಿ ಸಹ ಚರ್ಚೆಯಾಗುತ್ತಿದೆ.

ಇದುವರೆಗೆ ಅನೇಕ ಹೆಸರಾಂತ ವ್ಯಕ್ತಿಗಳು ದೇಹದಾನ ಮಾಡಿದ್ದಾರೆ. ಅವರಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಜ್ಯೋತಿಬಸು, ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ಎಂ. ಚಂದ್ರಶೇಖರ, ಮಾಜಿ ಸಚಿವ ಡಿ.ಟಿ. ಜಯಕುಮಾರ, ಚಲನಚಿತ್ರನಟ ಲೋಕೇಶ್, ಮೈಸೂರು ಮೆಡಿಕಲ್ ಕಾಲೇಜಿನ ಡಾ. ಗಜೇಂದ್ರ ಸೇರಿದ್ದಾರೆ.

### ವಿಲಿಯಂ ಹಾರ್ವೆ ಸಾಧನೆ

17ನೇ ಶತಮಾನದ ಕೊನೆಯಲ್ಲಿ ವೈದ್ಯಕೀಯ ವಿಜ್ಞಾನದಲ್ಲಿ ಸಂಶೋಧನೆಯಲ್ಲಿ ತೊಡಗಿದ್ದ ಇಂಗ್ಲೆಂಡ್‌ನ ಫೋಕ್‌ಸ್ಟೋನ್ ಕೆಂಟ್‌ದ ಸರ್ ವಿಲಿಯಂ ಹಾರ್ವೆ ತನ್ನ ಮೃತ ಸೋದರಿಯ ದೇಹ ಭೇದಿಸಿ ಮಾನವ ದೇಹದ ರಕ್ತ ಪರಿಚಲನೆ ಕಂಡು ಹಿಡಿದಿದ್ದ. ಆಗ ಇದು ವಿಚಿತ್ರವಾಗಿ ಕಂಡರೂ ಹಾರ್ವೆಗೆ ಅನಿವಾರ್ಯವಾಗಿತ್ತು. ಜನರ ಯಾವ ಮಾತನ್ನೂ ಕೇಳಿಸಿಕೊಳ್ಳದ ಹಾರ್ವೆ, ದೇಹದ ಅದ್ಭುತ ಸತ್ಯವೊಂದನ್ನು ಕಂಡುಹಿಡಿದಿದ್ದ. ರಕ್ತ ಪರಿಚಲನೆಯ ಶೋಧನೆ ವೈದ್ಯಕೀಯ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡಿತು.

### ದೇಶಾದ್ಯಂತ ನೇರ ಪ್ರಸಾರ

ಡಾ. ಮಹಾಂತೇಶ ತನ್ನ ತಂದೆಯ ದೇಹ ಭೇದನ ಮಾಡಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪಾಠ ಮಾಡುವ ದೃಶ್ಯವನ್ನು ನೇರ ಪ್ರಸಾರ ಮಾಡಲು ದೇಶದ ನಾನಾ ಭಾಷೆಗಳ ಮಾಧ್ಯಮ ಪ್ರತಿನಿಧಿಗಳು ಈಗಾಗಲೇ ಕಾಲೇಜು ಕ್ಯಾಂಪಸ್‌ನಲ್ಲಿ ಬೀಡುಬಿಟ್ಟಿದ್ದಾರೆ. ತನ್ನ ಪ್ರತಿನಿಧಿಯನ್ನು ಕಳಿಸುವ ಬಿಬಿಸಿ, ಡಾ. ಮಹಾಂತೇಶ ಅವರ ಸಂಪರ್ಕದಲ್ಲಿದೆ.